ಸಾಕ್ಷಿಗೆ ಕೇವಲ ಹಿಂದಿ ಭಾಷೆ ಮಾತ್ರ ಬರುತ್ತಿದ್ದು, ಕನ್ನಡ ಭಾಷೆ ಬರದೇ ಇರುವ ಕಾರಣ, ಭಾಷಾಂತರಗಾರರನ್ನಾಗಿ ಶ್ರೀ ಎಸ್.ಎನ್.ಎನ್. ವಕೀಲರನ್ನು ನೇಮಿಸಲಾಯಿತು.

**ಸಾಕ್ಷಿಗೆ ದಿನಾಂಕ 24-01-2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ವಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಎಂ.ವ್ಹಿ.ಎಲ್. ವಕೀಲರಿಂದ**

ನಾನು ಕೋಳಿ ಮಾಂಸ ಮಾರಾಟದ ವ್ಯವಹಾರವನ್ನು ಮಾಡುತ್ತೇನೆ. ನಾನು ಜಮೀನುಗಳನ್ನು ಖರೀದಿಸಿ ಪ್ಲಾಟುಗಳನ್ನಾಗಿ ಪರಿವರ್ತಿಸಿ, ಪ್ಲಾಟುಗಳನ್ನು ಮಾರಾಟ ಮಾಡುವ ವ್ಯವಹಾರವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸರಡಗಿ ಗ್ರಾಮದಲ್ಲಿ ಹೊಲವನ್ನು ಹೊಂದಿದ್ದು, ಸದರಿ ಹೊಲಗಳು ನನ್ನ ತಂದೆಯ ಹೆಸರಿನಲ್ಲಿದ್ದು, ಆ ಹೊಲಗಳು ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನಗೊಂಡಿರುತ್ತವೆ.

ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನಗೊಂಡ ನಮ್ಮ ಜಮೀನುಗಳಿಂದ ಬಂದ ಪರಿಹಾರ ಧನವನ್ನು ನಾನು ಬಡ್ಡಿಗೆ ಸಾಲದ ರೂಪದಲ್ಲಿ ಜನರಿಗೆ ನೀಡುತ್ತೆನೆ ಎಂದರೆ ಸರಿಯಲ್ಲ. ಸರ್ವೆ ನಂ. 179/2ರ ಜಮೀನು ಒಟ್ಟು 8-00 ಎಕರೆ ವಿಸ್ತೀರ್ಣದ್ದಾಗಿರುತ್ತದೆ. ಸದರಿ ಸರ್ವೆ ನಂ. 179/2 ಹೆಬ್ಬಾಳ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಹೆಬ್ಬಾಳ ಗ್ರಾಮವು ಕಾಳಗಿಯಿಂದ ಸುಮಾರು 40 ಕಿ.ಮೀ. ದೂರದಲ್ಲಿ ಇರಬಹುದು. ಹೆಬ್ಬಾಳದಲ್ಲಿ ನನಗೆ ಯಾರು ಸಂಬಂಧಿಕರು ಇರುವುದಿಲ್ಲ. ಹೆಬ್ಬಾಳದಿಂದ ಕಾಳಗಿ 15 ಕಿ.ಮೀ. ಅಂತರದಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ನಿಖರವಾಗಿ ದೂರ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಶಾನೆ ಪಿ-1ನ್ನು ವಕೀಲರು ತಯ್ಯಾರಿಸಿರುತ್ತಾರೆ. ನಿಶಾನೆ ಪಿ-1ನ್ನು ತಯ್ಯಾರಿಸಿದ ವಕೀಲರ ಹೆಸರು ನನಗೆ ನೆನಪಿರುವುದಿಲ್ಲ. ಸಾಕ್ಷಿಯು ಮುಂದುವರೆದು ನಿಶಾನೆ ಪಿ-1 ತಯ್ಯಾರಿಸಿ ಸುಮಾರು 10 ವರ್ಷಗಳು ಆಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರತಿವಾದಿ ಅನಕ್ಷರಸ್ಥ ಎಂದರೆ ಸರಿ. ಸಾಕ್ಷಿ ಮುಂದುವರೆದು ಆತನ ಮಗ ವಿದ್ಯಾವಂತನಾಗಿರುತ್ತಾನೆ ಎಂದು ನುಡಿಯುತ್ತಾರೆ. ಬಸಪ್ಪ ಈತನ ಮಗನ ಹೆಸರು ರುದ್ರಪ್ಪ ಆಗಿರುತ್ತದೆ. ಸದರಿ ರುದ್ರಪ್ಪ ಈತನು ವಿದ್ಯಾಭ್ಯಾಸ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಶಾನೆ ಪಿ-1ರಲ್ಲಿರುವ ರುದ್ರಪ್ಪ ಈತನ ಸಹಿ ಆತನದು ಅಲ್ಲ ಎಂದರೆ ಸರಿಯಲ್ಲ. ಮಹ್ಮದ ಅಜಗರ್ ಮತ್ತು ಅಜಾಜ ಅಹ್ಮದ ಇವರು ನನ್ನ ಗೆಳೆಯರು ಆಗಿರುತ್ತಾರೆ.

ಪ್ರತಿವಾದಿಯು ದಾವಾ ಆಸ್ತಿಯನ್ನು ನಿಶಾನೆ ಪಿ-1ರಂತೆ ಮಾರಾಟ ಮಾಡುತ್ತೇನೆಂದು ನನ್ನ ಜೊತೆಗೆ ಖರೀದಿ ಒಪ್ಪಂದ ಕರಾರು ಪತ್ರವನ್ನುಮಾಡಿಕೊಂಡಿರುತ್ತಾನೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಆಸ್ತಿಯನ್ನು ರೂ. 4,14,000/- ಗಳಿಗೆ ಮಾರಾಟ ಮಾಡುತ್ತಾನೆಂದು

ನಿಶಾನೆ ಪಿ-1 ರಂತೆ ಒಂದು ಒಪ್ಪಂದ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ರೂ. 4,00,000 ಲಕ್ಷ ನಗದು ಅವಶ್ಯಕತೆ ಇದ್ದುದ್ದರಿಂದ ಆತನು ನನ್ನ ಬಳಿ ಬಂದು ರೂ. 4,00,000/- ಹಣವನ್ನು ಸಾಲದ ರೂಪದಲ್ಲಿ ಪಡೆದುಕೊಂಡಿದ್ದನು ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯು ರೂ. 4,00,000/- ಸಾಲದ ಹಣದ ಭದ್ರತೆಗಾಗಿ ತನ್ನ ಜಮೀನಿನ ಪಹಣಿಯನ್ನು ನೀಡಿದ್ದು, ಸದರಿ ಪಹಣಿಯನ್ನು ಪಡೆದುಕೊಂಡು ನಾನು ನಿಶಾನೆ ಪಿ-1ರಂತೆ ಒಪ್ಪಂದ ಕರಾರು ಪತ್ರವನ್ನು ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಗೆ ನಾನು ಒಪ್ಪಂದ ಕರಾರು ಪತ್ರವನ್ನು ಸಾಲದ ಪತ್ರ ಎಂದು ನಂಬಿಸಿ ಸದರಿ ನಿಶಾನೆ ಪಿ-1ಕ್ಕೆ ನಾನು ಪ್ರತಿವಾದಿಯ ಹೆಬ್ಬಟ್ಟನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ: 22-06-2018ರಂದು ನಾನು ದಾವಾ ಆಸ್ತಿಗೆ ಜೆ.ಸಿ.ಬಿ. ತೆಗೆದುಕೊಂಡು ಹೋಗಿ ಲೇಔಟ ಮಾಡಲು ಕೆಲಸ ಪ್ರಾರಂಭಿಸಿದ್ದೇನು ಎಂದರೆ ಸರಿ. ಪ್ರತಿವಾದಿ ನನ್ನ ವಿರುದ್ಧ ಓ.ಎಸ್. 55/2018ರಂತೆ ಒಂದು ದಾವೆಯನ್ನು ಸಲ್ಲಿಸಿದ್ದಾನೆ ಎಂದರೆ ಸರಿ. ನಾನು ದಾವಾ ಆಸ್ತಿಗೆ ಲೇಔಟ ಮಾಡಲು ಹೋದಾಗ, ಪ್ರತಿವಾದಿಗೆ ನಾನು ನಿಶಾನೆ ಪಿ-1ರಂತೆ ಒಂದು ಖರೀದಿ ಕರಾರು ಪತ್ರ ಮಾಡಿಕೊಂಡಿರುವ ವಿಷಯ ಗೊತ್ತಾಯಿತು ಎಂದರೆ ಸರಿಯಲ್ಲ.

ಪ್ರತಿವಾದಿಯು ನನ್ನಿಂದ ರೂ. 4,00,000/- ಹಣವನ್ನು ಪಡೆದುಕೊಂಡು ದಾವಾ ಆಸ್ತಿಯನ್ನು ಮಾರಾಟ ಮಾಡುತ್ತೇನೆಂದು ನಿಶಾನೆ ಪಿ-1ರಂತೆ ಒಂದು ಖರೀದಿ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾನೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ನನ್ನಿಂದ ಉಳಿದ ರೂ. 14,000/- ಹಣವನ್ನು ಪಡೆದುಕೊಂಡು ದಾವಾ ಆಸ್ತಿಗೆ ಸಂಬಂಧಿಸಿದಂತೆ, ಖರೀದಿ ಪತ್ರವನ್ನು ಮಾಡಿಕೊಡುವಂತೆ ಒಪ್ಪಿದ್ದನು ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ: 08-12-2017ರಂದು ನಾನು ಪ್ರತಿವಾದಿಗೆ ಖರೀದಿ ಪತ್ರ ಮಾಡಿಕೊಡುವಂತೆ ಒಂದು ಕಾನೂನುಬದ್ಧ ನೋಟಿಸನ್ನು ನೀಡಿರುತ್ತೇನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಯಾವತ್ತು ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವುದಾಗಿ ಒಪ್ಪಂದ ಪತ್ರ ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡಬೇಕೆಂದು ನಾನು ನಿಶಾನೆ ಪಿ-1ನ್ನು

ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.   ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.